## ಜಾಣರ ಪೆಟ್ಟಿಗೆ

### ಕುರ್ಚಿಯ ಕಥಾ ಪ್ರಸಂಗವು

ಇದು ಅಧಿಕಾರ ಇಲ್ಲವೇ ರಾಜಕೀಯಕ್ಕೆ ಸಂಬಂಧಿಸಿದ ಸಿಂಹಾಸನ ಅಲ್ಲವೇ ಅಲ್ಲ! ಇತ್ತೀಚಿನ ದಿನಗಳಲ್ಲಿ ಭಾರೀ ಸಂಚಲನ ಉಂಟು ಮಾಡಿದ್ದ ಸರ್ಜಿಕಲ್ ಚೇರ್ ಅರ್ಥಾತ್ ಶೌಚಕ್ಕೆ ಬಳಸುವ ಪಾಶ್ಚಿಮಾತ್ಯ ಶೈಲಿಯ ಒಂದು ಸಾಧನ. ಅದನ್ನು ನಮ್ಮ ಸುದ್ದಿ ವಾಹಿನಿಗಳು ಪರಿಪರಿಯಾಗಿ ಬಣ್ಣಿಸಿ ದಿನಗಟ್ಟಲೇ ಪ್ರಸಾರ ಮಾಡಿ ಸಾರ್ಥಕತೆ ಮೆರೆದವು. ಇತಿಹಾಸದಲ್ಲಿಯೇ ಕಂಡು ಕೇಳರಿಯದ ಶೌಚದ ಕುರ್ಚಿಯನ್ನು ಕಾರಾಗೃಹದಲ್ಲಿರುವ ಒಬ್ಬ ಆರೋಪಿಗೆ ಒದಗಿಸುವ ಪ್ರಕ್ರಿಯೆಗಳನ್ನು ಬಿಟ್ಟೂ ಬಿಡದೆ ಪ್ರಸಾರ ಮಾಡಿದವು.

—ಆರ್. ವೀರೇಶ್ ಕುಮಾರ್, ಬೆಂಗಳೂರು

### ಚಂದನಕ್ಕೆ ಮೆರುಗು ತಂದ 'ಗೌರಿ'

ಚಂದನದಲ್ಲಿ 'ಗೌರಿ ಗಣೇಶ' ಹಬ್ಬದ ಸಂದರ್ಭಕ್ಕೆ ವಿಶೇಷ ವ್ಯಕ್ತಿಯನ್ನು ಆಹ್ವಾನಿಸಿದ್ದು ಅವಿಸ್ಮರಣೀಯ ಅನ್ನಿಸಿತು. ಅದು ಯಾರೆಂದರೆ, ಸಾಮಾಜಿಕ ಕಾರ್ಯಕರ್ತೆ, ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಅಕ್ಕಯ್ ಪದ್ಮಶಾಲಿ. ಅವರ ಆತ್ಮಕಥೆಯ ಭಾಗ ವಿಶ್ವವಿದ್ಯಾಲಯಕ್ಕೆ ಪಠ್ಯ ಆಗಿರುವುದು ಹೆಮ್ಮೆಯ ಸಂಗತಿ. ಅವರ ಕಳಕಳಿಯನ್ನು ನಮ್ಮ ಸಮಾಜ ಅರ್ಥ ಮಾಡಿಕೊಳ್ಳಬೇಕು. ಅವರಿಗೆ ಸಮಾಜದಲ್ಲಿ ಸಮಾನ ಅವಕಾಶ, ಕಾಳಜಿಗಳು ಸಿಗುವಂತೆ ಆಗಬೇಕು. ಆ ಸಮುದಾಯವನ್ನು ಮಾನವೀಯವಾಗಿ ನೋಡುವುದು ನಮ್ಮ ಕರ್ತವ್ಯ.

—ಭಾರತೀ ಗಂಗಾಧರ್, ಬೆಂಗಳೂರು

### ವೀಕ್ಷಕ ವಿವರಣೆಯ 'ದರ್ಶನ'

ಮೊದಲು ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿ, ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆಯಂತಹ ಕಾರ್ಯಕ್ರಮಗಳು ವೀಕ್ಷಕ ವಿವರಣೆಯೊಂದಿಗೆ ನೇರಪ್ರಸಾರವಾಗುತ್ತಿದ್ದವು. ಈ ದೃಶ್ಯಗಳನ್ನು ವೀಕ್ಷಕರು ಮನೆಯಲ್ಲಿಯೇ ಕುಳಿತು ಕಣ್ತುಂಬಿಕೊಳ್ಳುತ್ತಿದ್ದರು. ಈಗ ಖಾಸಗಿ ವಾಹಿನಿಗಳು ಕೊಲೆಯಂತಹ ಗಂಭೀರ ಆರೋಪ ಹೊತ್ತ ಆರೋಪಿಯನ್ನು ಹಿಂಬಾಲಿಸುತ್ತಾ ಜೈಲಿನವರೆಗೂ ಹೋಗಿ, ಆತನನ್ನು ಭೇಟಿ ಮಾಡಲು ಯಾರು ಬರುತ್ತಾರೆ ಎಂಬ ವೀಕ್ಷಕ ವಿವರಣೆಯೊಂದಿಗೆ ನೇರಪ್ರಸಾರ ಮಾಡುತ್ತಿವೆ.

ಪೊಲೀಸ್ ಠಾಣೆ ಹಾಗೂ ನ್ಯಾಯಾಲಯವನ್ನು ಪ್ರವೇಶಿಸುವಂತೆ ಕಾರಾಗೃಹದೊಳಗೆ ಪ್ರವೇಶಿಸಲು ಅನುಮತಿ ನೀಡಿದರೆ ಜೈಲಿನೊಳಗೆ ಠಿಕಾಣಿ ಹೂಡಿ ಅಲ್ಲಿಂದಲೇ ವೀಕ್ಷಕ ವಿವರಣೆಯ ದರ್ಶನ ಮಾಡಿಸುತ್ತಿದ್ದವೋ ಏನೋ?

—ಪಿ.ಜೆ. ರಾಘವೇಂದ್ರ, ಮೈಸೂರು

ವಾರದ ಪತ್ರ

### ಜಾಹೀರಾತಿನ ಹೊಸ ಬಗೆ

ನಮ್ಮ ಕನ್ನಡ ಧಾರಾವಾಹಿಗಳು ವಾಣಿಜ್ಯ ಜಾಹೀರಾತಿಗೆ ಹೊಸ ವಿಧಾನವನ್ನು ಕಂಡುಕೊಂಡಂತೆ ತೋರುತ್ತದೆ. ಈ ಮೊದಲು ಯಾವುದೋ ಒಂದು ಉತ್ಪಾದನೆಯ ಜಾಹೀರಾತನ್ನು ತೋರಿಸಬೇಕಾಗಿದ್ದರೆ ಕಥೆಗೆ ಕೆಲವು ನಿಮಿಷಗಳ ವಿರಾಮ ನೀಡಿ ಜಾಹೀರಾತು ಪ್ರಸಾರ ಮಾಡುತ್ತಿದ್ದರು. ರಸ್ತೆಯ ದೃಶ್ಯವನ್ನು ತೋರಿಸಿ ರಸ್ತೆಯ ಮೇಲೆ ಹಾಕಿದ ಜಾಹೀರಾತಿನ ಹೋರ್ಡಿಂಗ್ ಮೇಲೆ ಕೆಲವು ಸೆಕೆಂಡ್ ಕ್ಯಾಮೆರಾ ಕೇಂದ್ರಿಕರಿಸುತ್ತಾರೆ. ಇದರಿಂದ ಧಾರಾವಾಹಿಯ ಓಟಕ್ಕೆ ತೊಂದರೆ ಆಗದಿದ್ದರೂ ಕಥೆಗೆ ಸಂಬಂಧವೇ ಇಲ್ಲದ ರಸ್ತೆಯ ದೃಶ್ಯವನ್ನು ಪದೇ ಪದೇ ತೋರಿಸುವುದು ಆಭಾಸವೆನಿಸುತ್ತದೆ.

—ಮುರಲೀಧರ ಕುಲಕರ್ಣಿ, ಬೀದರ್

### ಸೂಪರ್ ಸ್ಟಾರ್ ಶಿಕ್ಷಕರು

ಸ್ಟಾರ್ ಸುವರ್ಣದ 'ಸುವರ್ಣ ಸೂಪರ್ ಸ್ಟಾರ್'ನಲ್ಲಿ ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಶಿಕ್ಷಕರೇ ಸ್ಪರ್ಧಿಸಿದ್ದು ಖುಷಿ ನೀಡಿತು. ಶಿಕ್ಷಕ ವೃತ್ತಿ ಬಹಳ ಪವಿತ್ರವಾದದ್ದು, ಈಗಿನ ಪೋಷಕರು ಹೈಸ್ಕೂಲ್ ಓದುವಾಗಲೇ ತಮ್ಮ ಮಕ್ಕಳಿಗೆ ಮೊಬೈಲ್, ಟ್ಯಾಬ್, ಲ್ಯಾಪ್‌ಟಾಪ್ ಮಾದರಿಯ ಗ್ಯಾಜೆಟ್‌ಗಳನ್ನು ಅನವಶ್ಯಕವಾಗಿ ಕೊಡಿಸುತ್ತಾರೆ.

ಶಿಕ್ಷಕರಿಗೆ ಗೌರವ ಕೊಡುವಂತಹ ಸಂಸ್ಕಾರವನ್ನು ಮೊದಲು ಪೋಷಕರು ಮನೆಯಲ್ಲಿ ಹೇಳಿಕೊಡಬೇಕು ಎಂಬಂತಹ ವಿಚಾರ ಮಂಥನಗಳನ್ನು ಈ ವೇದಿಕೆಯ ಮೂಲಕ ಸ್ಪರ್ಧಿಗಳು ಹಂಚಿಕೊಂಡರು. ನಿಜಕ್ಕೂ ಇದೊಂದು ಗಹನವಾದ ವಿಚಾರವೇ ಆಗಿದೆ. ಶಿಕ್ಷಕ ವೃತ್ತಿಯಲ್ಲಿದ್ದ ನನಗೆ ಹಳೆಯ ವಿದ್ಯಾರ್ಥಿ ಮಾತನಾಡಿಸಿದಾಗ, ಅವರ ಅಭ್ಯುದಯದ ಬಗ್ಗೆ ತಿಳಿದು ನಿಜಕ್ಕೂ ಖುಷಿಯಾಗುತ್ತದೆ. ಈ ಶೋ ನೋಡಿ ನನ್ನ ವೃತ್ತಿಯ ನೆನಪುಗಳನ್ನು ಮೆಲುಕು ಹಾಕುವಂತೆ ಮಾಡಿತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

### ಅತಿ ಆದರ್ಶ ಹುಚ್ಚುತನ

ಝೀ ಕನ್ನಡದ 'ಅಣ್ಣಯ್ಯ' ಆರಂಭದಲ್ಲೇ ನೋಡಲು ಕಿರಿಕಿರಿ ಅನ್ನಿಸುತ್ತಿದೆ. ನಾಯಕನಿಗೆ ನಾಲ್ವರು ತಂಗಿಯರು. ಜೀವನ ನಡೆಸಲು ತುಂಬ ಕಷ್ಟಪಡುತ್ತಾನೆ. ಏಕೋ ನಟನಿಗೆ ಆ ಪಾತ್ರ ಒಪ್ಪುತ್ತಿಲ್ಲ. ಅತಿ ಆದರ್ಶ ಪಾತ್ರಗಳ ಸೃಷ್ಟಿ ವಾಸ್ತವವನ್ನು ಮರೆಮಾಚಿದಂತೆ ಆಗುತ್ತದೆ. ವಾಸ್ತವಕ್ಕೆ ಹತ್ತಿರವಾಗುವಂತೆ ಕಥೆಯನ್ನು ರೂಪಿಸಬೇಕು.

—ಸಾವಿತ್ರಿ ಶಿವಾನಂದ ಎಂ.

### ಸಮಾಜಕ್ಕೆ ಪಾಠ ಈ ಧಾರಾವಾಹಿ

ಝೀ ಕನ್ನಡದ 'ಮಹಾನಾಯಕ'ದಲ್ಲಿ ಅಂಬೇಡ್ಕರ್ ಅವರು ತಮ್ಮ ಜೀವಿತ ಅವಧಿಯಲ್ಲಿ ಮನುಕುಲದ ಒಳಿತಿಗಾಗಿ ನಡೆಸಿದ ಅವಿರತ ಹೋರಾಟ ಅದ್ಭುತವಾಗಿ ಒಡಮೂಡಿದೆ. ಸಾಮಾಜಿಕವಾಗಿ ತಾರತಮ್ಯ ಮತ್ತು ಮೌಢ್ಯವದ ತಡೆಗೆ ನಿರಂತರವಾಗಿ ಅವರು ಹೋರಾಡಿದ್ದಾರೆ. ಈಗಲೂ ಪತ್ರಿಕೆಯಲ್ಲಿ ಮೌಢ್ಯ ಅಂಧಕಾರದ ಸುದ್ದಿಗಳನ್ನು ಓದುತ್ತಿರುತ್ತೇನೆ. ಇಂದಿಗೂ ಬಾಲ್ಯವಿವಾಹವನ್ನು ಸಂಪೂರ್ಣ ತಡೆಯಲು ಸಾಧ್ಯವಾಗಿಲ್ಲ. ಅದನ್ನು ನಿಯಂತ್ರಿಸುವುದು ತೀರಾ ಅಗತ್ಯ. ಈ ಹಿನ್ನೆಲೆಯಲ್ಲಿ ಭಾರತ ಸಂವಿಧಾನ ಶಿಲ್ಪಿ ಕುರಿತ ಧಾರಾವಾಹಿ ನಮ್ಮ ಸಮಾಜಕ್ಕೊಂದು ಪಾಠವೇ ಸರಿ.

—ಸಾವಿತ್ರಮ್ಮ ಕೆ. ವಿಭೂತಿ, ಹರಿಹರ

### ಮಕ್ಕಳ ಹಿಂಸೆ ನಿಲ್ಲಲಿ

ಕಲರ್ಸ್ ಕನ್ನಡದ 'ನಿನಗಾಗಿ'ಯಲ್ಲಿ ನ್ಯಾಯ ಕೇಳುವ ಲಾಯರ್ ತನ್ನ ಮಗಳ ಸಾವಿಗೆ ಅಳಿಯ ಕಾರಣ ಎಂದುಕೊಳ್ಳುತ್ತಾನೆ. ಅದಕ್ಕಾಗಿ ಅಳಿಯ ಮತ್ತು ಚಿಕ್ಕ ಮೊಮ್ಮಗಳ ಮೇಲೆ ದ್ವೇಷವನ್ನು ಸಾಧಿಸುತ್ತಾನೆ. ಅವರಿಗೆ ತೊಂದರೆ ಕೊಡಲು ಅನೇಕ ಕುತಂತ್ರಗಳನ್ನು ಹೆಣೆಯುತ್ತಾನೆ.

ರಚನಾಳನ್ನು ಮದುವೆ ಆಗಲು ಬಯಸುವ ಅಶ್ವಿನ್, ಚಿಕ್ಕ ಮಗುವಿನ ಮೇಲೆ ಕಳ್ಳತನದ ಆರೋಪ ಹೊರಿಸುತ್ತಾನೆ. ಅದಕ್ಕಾಗಿ ಆ ಮಗುವಿಗೆ ಹೀಯಾಳಿಸುವುದು, ಜೀವ ತೆಗೆಯಲು ಮಾಡುವ ಪ್ರಯತ್ನ ಕ್ರೌರ್ಯದ ಪರಮಾವಧಿ. ಮಕ್ಕಳನ್ನು ಹಿಂಸಿಸುವ ಮತ್ತು ಅವರ ಮೇಲೆ ದೌರ್ಜನ್ಯ ಎಸಗುವ ಕಥೆಗೆ ಕತ್ತರಿ ಅಗತ್ಯ.

—ಶರ್ಮಿಷ್ಠ, ಬೆಂಗಳೂರು

### ಸುದ್ದಿಗೆ ಬೆಲೆ ಬರುವಂತಾಗಲಿ

ಕನ್ನಡದ ಪ್ರಮುಖ ಟೀವಿ ಸುದ್ದಿ ವಾಹಿನಿಗಳಲ್ಲಿ ದಿನವಿಡೀ ಕೊಲೆ, ದೌರ್ಜನ್ಯ, ವಿಕೃತ ಕಾಮ, ದರೋಡೆ, ನೀಚ ರಾಜಕೀಯದ ಸಂಗತಿಯನ್ನು ಅಬ್ಬರದಿಂದ ಪ್ರಚಾರ ಮಾಡುತ್ತಾರೆ. ದೌರ್ಜನ್ಯ ತುಂಬಿರುವ ವಿಷಯಗಳನ್ನೇ ಹಿನ್ನೆಲೆ ಸಂಗೀತದೊಂದಿಗೆ ಕಿರುಚಾಟದಿಂದ ಪ್ರಚಾರ ಮಾಡುವುದು ಶೋಭೆಯಲ್ಲ. ಸುದ್ದಿ ವಾಹಿನಿಗಳು ಗುಣಾತ್ಮಕ ಸುದ್ದಿಗಳನ್ನು ಪತ್ರಿಕೆಗಳನ್ನು ಓದಿ ತಿಳಿಯಲಿ. ನಾಡಿನ ಅಭಿವೃದ್ಧಿಗೆ ನೆರವಾಗುವಂತೆ ಬೆಲೆ ಏರಿಕೆ, ರೈತರ ಬವಣೆ, ಕಾರ್ಮಿಕರ ಸಮಸ್ಯೆ, ನಿರುದ್ಯೋಗದಿಂದ ಪರಿತಪಿಸುವ ಯುವಕರ ಆತಂಕದ ಬದುಕಿಗೆ ಮಹತ್ವ ನೀಡಿದರೆ ಸುದ್ದಿ ವಾಹಿನಿಗಳಿಗೆ ಬೆಲೆ ಬರುವುದು.

—ವಿ. ಸುರೇಶ್, ಹುಬ್ಬಳ್ಳಿ